# ಒಳಗೂ ಹೊರಗೂ



ಇವತ್ತಿನ ಕತೆಯಲ್ಲ, 13ನೇ ಶತಮಾನದ ಚೀನದ್ದು
ಲಿಯು ಚಿ ಬರೆದ ಕತೆಯೊಂದರಲ್ಲಿ
ಬೀದಿ ವ್ಯಾಪಾರಿಯೊಬ್ಬ ಮಾರುತ್ತಿರುತ್ತಿದ್ದ ಕಿತ್ತಳೆ
ಅದು ಸದಾ ಫಳಫಳವೆನ್ನುತ್ತಿತ್ತು ಕಿತ್ತಳೆಯ ಬಣ್ಣದಲ್ಲಿ
ಆದರೆ ಹಣ್ಣೊಳಗೆ ಮಾತ್ರ ಕೊಳೆತು ಕರಕಲಾದ ತೊಳೆ

ಲಿಯು ಚಿ ಒಮ್ಮೆ ಕೇಳಿಯೇಬಿಟ್ಟ ಆ ವ್ಯಾಪಾರಿಯನ್ನು:
ನಿನ್ನದೇನು ಅಲಂಕಾರಕ್ಕಿರುವ ಹಣ್ಣೆ? ಅಥವಾ ನನ್ನಂಥವರು
ಮೋಸಹೋಗಲೆಂದೇ ಹೀಗೆ ಬಳಿದಿಟ್ಟಿದ್ದೀಯ ಬಣ್ಣ?
ಅದಕ್ಕವನು ಹೇಳಿದ: ಸ್ವಾಮಿ ಎಷ್ಟೋ ವರ್ಷದಿಂದ
ವ್ಯಾಪಾರ ಮಾಡಿಕೊಂಡಿದ್ದೇನೆ. ಇದೇ ನನ್ನ ಜೀವನೋಪಾಯ
ನಾನು ಮಾರುವೆ, ಪ್ರಪಂಚ ಕೊಳ್ಳುತ್ತೆ. ನನಗಿನ್ನೂ ಗೊತ್ತಾಗಬೇಕಿದೆ
ನಾನು ಮೋಸಗಾರ, ನೀವೊಬ್ಬರೇ ಪ್ರಾಮಾಣಿಕರು ಅಂತ
ಝುಗಮಗಿಸುವ ಪೋಷಾಕು ತೊಟ್ಟು ದಿಲ್ಲಗಿಯಾಗಿರುವ
ಇವತ್ತಿನ ಮಂತ್ರಿಗಳು ಪೋಸು ಕೊಡುತ್ತಾರೆ ರಾಜ್ಯರಕ್ಷಕರಂತೆ
ಅವರಲ್ಲುಂಟೆ ಪೂರ್ವದವರಲ್ಲಿದ್ದ ವಿನಯ ವಿವೇಕ
ಕೇಡಿಗರು ಅಬ್ಬರಿಸುತ್ತಿದ್ದಾರೆ, ಯಾರೂ ಅವರನ್ನು
ಹದ್ದುಬಸ್ತಿನಲ್ಲಿಡುತ್ತಿಲ್ಲ; ಜನರು ಕಷ್ಟಪಡುತ್ತಿದ್ದಾರೆ
ಯಾರೂ ಅದನ್ನು ನಿವಾರಿಸುತ್ತಿಲ್ಲ; ಗುಮಾಸ್ತರು ಭ್ರಷ್ಟರು
ಯಾರೂ ಅವರನ್ನು ಹತ್ತಿಕ್ಕರು; ನ್ಯಾಯವೆನ್ನುವುದು
ಅಧೋಗತಿಗಿಳಿದಿದೆ; ಯಾರೂ ಅದನ್ನು ಮೇಲೆತ್ತುತ್ತಿಲ್ಲ
ಅಧಿಕಾರಿಗಳು ಸರಕಾರವನ್ನೇ ಮುಕ್ಕುತ್ತಿದ್ದಾರೆ ಸಿಗ್ಗಿಲ್ಲದೆ
ಆರಾಮವಾಗಿದ್ದಾರೆ ಭವ್ಯಭವನಗಳಲ್ಲಿ, ಸವಾರಿ ಮಾಡುತ್ತಿದ್ದಾರೆ
ಮಜಬೂತಾದ ಕುದುರೆಗಳನ್ನು, ಸದಾ ಕುಡಿದು ತಿಂದು
ಕೊಬ್ಬುತ್ತಿದ್ದಾರೆ. ಹೊರಗೆ ಮಾತ್ರ ಎಲ್ಲರೂ
ಮರ್ಯಾದಸ್ತರೇ
ಆದರೆ ಎಲ್ಲರ ಒಳಗೂ ಕೊಳಕೆಂದರೆ ಕೊಳಕು ನನ್ನ
ಹಣ್ಣುಗಳಂತೆ.
ನಿಮಗೋ ಬಿಡುವೇ ಇಲ್ಲ ಅವರೆಲ್ಲರ
ವಿಚಾರಿಸಿಕೊಳ್ಳುವುದಕ್ಕೆ
ಅದಕ್ಕೆಂದೇ ನಿಮಗೆ ನನ್ನ ಈ ಕಿತ್ತಳೆಯ ಕಂಡು
ಕಣ್ಣುಕಿಸುರು



ಪಾಪ, ಲಿಯು ಚಿ ಏನು ಹೇಳಿಯಾನು? ತಕ್ಷಣ
ಅಲ್ಲಿಂದ ಕಾಲುಕಿತ್ತ